# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ :– 06/06/2022 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ 60 ಸಗಾಯಪುರಂ ವಾರ್ಡ್ ಸಮಿತಿ ಸಭೆಯ ನಡುವಳಿ**

**ಸಭೆಗೆ ಹಾಜರಿದ್ದ ಅಧಿಕಾರಿಗಳು :**

1. ಶ್ರೀ. ಮಲ್ಲಪ್ಪ ಭಜಂತ್ರಿ ನೋಡಲ್ ಅಧಿಕಾರಿಗಳು
2. ಶ್ರೀ. ಬಸವರಾಜು ವಾರ್ಡ್ ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ
3. ಶ್ರೀ. ವೆಂಕಟೇಶ ಹಿರಿಯ ಆರೋಗ್ಯ ಪರೀವಿಕ್ಷಕಕರು
4. ಶ್ರೀ. ಅಶ್ವತ್ ನಾರಾಯಣ ಕಿರಿಯ ಆರೋಗ್ಯ ಪರೀವಿಕ್ಷಕಕರು
5. ಶ್ರೀ. ಶೇಖರ ತೆರಿಗೆ ಪರೀವಿಕ್ಷಕರು
6. ಶ್ರೀ. ಸಿ.ಎಮ್ ವೆಂಕಟೇಶ ತೋಟಗಾರಿಕೆ ಕೆಲಸ ನೀರಿಕ್ಷಕರು
7. ಶ್ರೀಮತಿ. ವರಲಕ್ಷ್ಮಿ ಟೈಲರಿಂಗ್ ಶಿಕ್ಷಕಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿ ಅಧಿಕಾರಿ ವಾರ್ಡ್–60 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್–60 ರ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು.

➢ **ಆರೋಗ್ಯ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯ ಗಾಸ್ಪಾಲ್ ಸ್ಟ್ರೀಟ್, ಹಳೆ ಬಾಗಲೂರು ಲೇಔಟ್, ಹೊಸ ಬಾಗಲೂರು ಲೇಔಟ್‌ನಲ್ಲಿ ಕಸ ನಿರ್ವಹಣೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಕೂಡಲೆ ಸಮಸ್ಯೆ ಪರಿಹರಿಸಲು ಆರೋಗ್ಯ ಪರೀವಿಕ್ಷಕರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಸಂತ ಆಲ್ಫನ್ ಶಾಲೆಯ ಹತ್ತಿರದಲ್ಲಿರುವ ಖಾಲಿ ಜಾಗದಲ್ಲಿ ಸಾರ್ವಜನಿಕರು ಕಸ ಹಾಗೂ ಮಾತ್ರ ವಿಸರ್ಜನೆ ಮಾಡುತ್ತಿದ್ದು ಕೂಡಲೆ ಪರಿಹರಿಸಲು ಸೂಚಿಸಿದರು.

**ಕ್ರಮ : ಕಿರಿಯ ಆರೋಗ್ಯ ಪರೀವಿಕ್ಷಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಸೂಚಿಸಿದರು.**

➢ **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯ ಹಳೆ ಬಾಗಲೂರು ಮತ್ತು ಹೋಸ ಬಾಗಲೂರು ಲೇಔಟ್‌ನಲ್ಲಿ ನೀರಿನ ಸಮಸ್ಯೆಗಳನ್ನು ಕೂಡಲೆ ಪರಿಹರಿಸಬೇಕಾಗಿ ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಈ ಸಭೆ ಮುಖಾಂತರ ಸಹಾಯಕ ಅಭಿಯಂತರರಿಗೆ ಸೂಚಿಸಿದರು.**

➢ **ರಸ್ತೆ ಮತ್ತು ಮೂಲಭೂತ ಸೌಕರ್ಯ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯ ಹೆಣ್ಣೂರು ಮುಖ್ಯ ರಸ್ತೆಯ ಸುಂದರ್ ಆಸ್ಪತ್ರೇ ಮುಂದಿನ ರಸ್ತೆಯನ್ನು ಹೊಸದಾಗಿ ನಿರ್ಮಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಈ ಸಭೆ ಮುಖಾಂತರ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.**

➢ **ಪೊಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ವಾಹನ ನೀಲುಗಡೆ ಮಾಡುತ್ತಿದ್ದು ಕ್ರಮ ಕೈಗೋಳ್ಳಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಪಾಟರಿ ರಸ್ತೆಯಲ್ಲಿನ ಪಾದಾಚಾರಿ ಮಾರ್ಗದಲ್ಲಿ ಹಾಕಿರುವ ರಸ್ತೆ ಡಿವೈಡರ್‌ಗಳನ್ನು ಕೂಡಲೆ ತೆರೆವುಗೊಳಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಪಾರ್ಕ್ ಹತ್ತಿರ ವಾರದ ಅಂತ್ಯದಲ್ಲಿ ಕುದುರೆ ಸವಾರಿಯನ್ನು ನಿಲ್ಲಿಸಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ **ಅರಣ್ಯ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಟೌನ್ ಸುತ್ತಮುತ್ತಲಿನ ಮರಗಳಲ್ಲಿನ ನಿರ್ಜೀವವಾದ ರೆಂಬೆ ಕೊಂಬೆಗಳಿದ್ದು ಇವುಗಳನ್ನು ಕೂಡಲೆ ತೇರುವುಗೋಳಿಸಲು ಸೂಚಿಸಿದರು.

**ಕ್ರಮ : ಈ ಮೇಲ ಸೂಚಿಸಿರುವಂತಹ ಸಮಸ್ಯೆಗೆ ಪರಿಹರಿಸುವಂತೆ ಅರಣ್ಯಾಧಿಕಾರಿಗಳಿಗೆ ಈ ಸಭೆ ಮುಂಖಾಂತರ ಸೂಚಿಸಲಾಯಿತು.**

➢ **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿನ ರಿಚ್ಚರ್ಡ್ ಟೌನ್ ಸುತ್ತಮುತ್ತಲಿನ ಒಳ ಚರಂಡಿ ಬ್ಲಾಕೆಜ್‌ಗಳನ್ನು ಕೂಡಲೆ ಸರಿಪಡಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಡೇವಿಸ್ ರಸ್ತೆಯಲ್ಲಿನ ನೀರಿನ ಕಂಟ್ರೊಲ್ ವಾಲ್ವ್‌ನಿಂದಾಗಿ ರಸ್ತೆ ಹಾಳಾಗುತ್ತಿದ್ದು ಹಾಗೂ ರಸ್ತೆ ಸವಾರರಿಗೆ ತೊಂದರೆ ಉಂಟಾಗುತ್ತಿದ್ದು ಕೂಡಲೆ ಪರಿಹರಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ನೀರು ಮತ್ತು ಒಳಚರಂಡಿ ಕಾಮಗಾರಿ ನಿರ್ವಹಿಸಲು ರಸ್ತೆ ಕತ್ತರಿಸುತ್ತಿರುವುದು, ಸದರಿ ಕಾಮಗಾರಿಗಳ ನಿರ್ವಹಣೆ ಸಮಯದಲ್ಲಿ ವಾರ್ಡ್ ಇಂಜಿನಿಯರ್‌ರವರಿಗೆ ಸೂಚನೆ/ ಮಾಹಿತಿ ನೀಡದೆ ಇರುವುದು ಕಂಡುಬಂದಿರುತ್ತದೆ. ಕಾಮಗಾರಿ ಸಮಯದಲ್ಲಿ ಮಾಹಿತಿ ನೀಡಲು ಹಾಗೂ ರಸ್ತೆಯನ್ನು ಯತಾಸ್ಥಿತಿಗೆ ತಂದು ಸಂಪರ್ಕ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.**

➢ **ವಿದ್ಯುತ್ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿನ ಸ್ಟ್ರಿಟ್ ಲೈಟ್‌ಗಳನ್ನೂ ಕೂಡಲೆ ಸರಿಪಡಿಸಬೇಕೆಂದು ಕಿರಿಯ ಅಭಿಯಂತರರಿಗೆ ಸೂಚಿಸಿದೆ.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ವಿದ್ಯುತ್ ) ಈ ಸಭೆ ಮುಖಾಂತರ ಸೂಚಿಸಿದರು.**

➤ **ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಒಳಪಡುವ ಪಾರ್ಕ್‌ಗಳನ್ನು ನವೀಕರಣ ಹಾಗೂ ಎಲೆ ಕತ್ತರಿಸುವ ಮಿಷನ್‌ನ್ನು (ಶೆಡ್ಡರರ್) ಕೂಡಲೆ ನವೀಕರಣಗೋಳಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಒಳಪಡುವ ರಿಚ್ಚರ್ಡ್ ಪಾರ್ಕ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಶೌಚಾಲಯವನ್ನು ನವೀಕರಣ ಹಾಗೂ ಗುತ್ತಿಗೆಯ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡಲು ಸೂಚಿಸಿದರು.

**ಕ್ರಮ : ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ತೋಟಗಾರಿಕೆ ಕೆಲಸ ನೀರಿಕ್ಷಕರಿಗೆ ಸೂಚಿಸಲಾಯಿತು**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್–60**

**ಪ್ರತಿಗಳನ್ನು:**

1. ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ
4. ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಅಧೀಕ್ಷಕರು, (ತೋಟಗಾರಿಕೆ ಇಲಾಖೆ), ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ರಸ್ತೆ ಮತ್ತು ಮೂಲಭೂತ ಸೌಕರ್ಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ಬಿ.ಬಿ.ಎಂಪಿ. ಮೆಯೋಹಾಲ್ ರವರ ಮಾಹಿತಿಗಾಗಿ ಸಲ್ಲಿಸಿದೆ
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಪೋಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ಪೋಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
16. ಪೋಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
17. ಪೋಲೀಸ್ ಇನ್ಸ್‌ಪೆಕ್ಟರ್(ಟ್ರಾಫಿಕ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
18. ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
19. ಕಛೇರಿ ಪ್ರತಿ.